ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
MANGALORE ELECTRICITY SUPPLY COMPANY LIMITED
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
MESCOM
CIN:U40109KA2002SGCO30425
ದೂರವಾಣಿ ಸಂಖ್ಯೆ: 0824-2885766

ಸಂಖ್ಯೆ: ಪ್ರ.ವ್ಯ/ಸ.ಪ್ರ.ವ್ಯ(ಆ)/ಲೆ(ಆ)/ಸುತ್ತೋಲೆ/ಹಿಸ-115/ CYS-38 ದಿನಾಂಕ: 10/03/2020

# ಸುತ್ತೋಲೆ

**ವಿಷಯ:** ಶಿಸ್ತು ಪಾಲನೆ ಬಗ್ಗೆ.

**ಉಲ್ಲೇಖ:**
1. ಲೆಕ್ಕ ಕೈಪಿಡಿ-2(ಬಿ) ಕಂಡಿಕೆ 505 (7).
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿವೈಎಸ್-19 ದಿನಾಂಕ 01.09.2016.
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿವೈಎಸ್-06 ದಿನಾಂಕ 20.04.2018.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿವೈಎಸ್-103 ದಿನಾಂಕ 14.06.2019.

****

ಮೆಸ್ಕಾಂ., ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಹಾಗೂ ಹೊರಗುತ್ತಿಗೆ ಮಾನವ ಸಂಪನ್ಮೂಲ ಸೇವೆಗಳು ಕಛೇರಿಗೆ ನಿಗದಿತ ಸಮಯದಲ್ಲಿ ಹಾಜರಾಗದೆ ಮತ್ತು ಮೇಲಾಧಿಕಾರಿಗಳ ಪೂರ್ವಾನುಮತಿಯಿಲ್ಲದೆ ವಿಳಂಬವಾಗಿ ಹಾಜರಾಗುತ್ತಿರುವುದು ಹಾಗೂ ಕಛೇರಿ ಕೆಲಸದ ನಿಗದಿತ ಅವಧಿಗಿಂತ ಮುಂಚಿತವಾಗಿ ಕಛೇರಿಯಿಂದ ನಿರ್ಗಮಿಸುತ್ತಿರುವುದು, ಕರ್ತವ್ಯದ ವೇಳೆಯಲ್ಲಿ ಸಮವಸ್ತ್ರವನ್ನು ಧರಿಸದೆ ಕರ್ತವ್ಯ ನಿರ್ವಹಿಸುವುದು. ಕಂಪೆನಿ ಕಾರ್ಯಚಟುವಟಿಕೆಯ ಹೊರತಾಗಿ ಖಾಸಗಿ ಕೆಲಸಗಳನ್ನು ನಿರ್ವಹಿಸುತ್ತಿರುವುದು, ಮೊಬೈಲ್‌ನಲ್ಲಿ ಕಾಲಹರಣ ಮಾಡುತ್ತಿರುವುದಾಗಿ ಹಾಗೂ ಗ್ರಾಹಕರಿಗೆ ಸೂಕ್ತವಾಗಿ ಸ್ಪಂದಿಸದೇ ಇರುವುದರ ಬಗ್ಗೆ ಅನೇಕ ದೂರುಗಳು ನಿಗಮ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಮೇಲಿನ ವಿಷಯಗಳ ಬಗ್ಗೆ ಈಗಾಗಲೇ ಉಲ್ಲೇಖ (2),(3) ಮತ್ತು (4)ರಲ್ಲಿ ಸೂಚನೆಯನ್ನು ನೀಡಲಾಗಿರುತ್ತದೆ. ಆದಾಗ್ಯೂ, ಅಧಿಕಾರಿ/ನೌಕರರು ತಮ್ಮ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಿಸ್ತುಪಾಲನೆ ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಅಲ್ಲದೆ, ಈ ರೀತಿ ವರ್ತನೆಯಿಂದ ಕಂಪನಿಯ ಕೆಲಸ ಕಾರ್ಯಗಳಿಗೆ ಹಿನ್ನಡೆಯುಂಟಾಗುತ್ತದೆ ಹಾಗೂ ಕಂಪನಿಯ ವರ್ಚಸ್ಸಿಗೆ ಧಕ್ಕೆಯುಂಟಾಗುತ್ತದೆ.

ಆದ್ದರಿಂದ, **ಮೆಸ್ಕಾಂ., ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಹಾಗೂ ಹೊರಗುತ್ತಿಗೆ ಮಾನವ ಸಂಪನ್ಮೂಲ ಸೇವೆಗಳು ಕಡ್ಡಾಯವಾಗಿ ಕಛೇರಿಗೆ ನಿಗದಿತ ಸಮಯದಲ್ಲಿ ಹಾಜರಾಗಿ ಕೆಲಸ ನಿರ್ವಹಿಸುವಂತೆ, ಕಂಪನಿ ವತಿಯಿಂದ ಸಮವಸ್ತ್ರವನ್ನು ಒದಗಿಸಿದ ಎಲ್ಲಾ ಸಿಬ್ಬಂದಿಗಳು ಕರ್ತವ್ಯದ ವೇಳೆಯಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸುವಂತೆ ಮತ್ತು ಕಂಪನಿಯ ಕಾರ್ಯಚಟುವಟಿಕೆಯ ಹೊರತಾಗಿ ಖಾಸಗಿ ಕೆಲಸವನ್ನು ನಿರ್ವಹಿಸದಂತೆ ಹಾಗೂ ಕರ್ತವ್ಯದ ವೇಳೆಯಲ್ಲಿ ಮೊಬೈಲ್‌ನಲ್ಲಿ ಕಾಲಹರಣ ಮಾಡದೆ ಕರ್ತವ್ಯನಿರ್ವಹಿಸಲು ಮತ್ತು ಗ್ರಾಹಕರ ಮನವಿಗೆ ಸೂಕ್ತವಾಗಿ ಸ್ಪಂದಿಸಿ, ಗ್ರಾಹಕರಿಂದ ಯಾವುದೇ ದೂರುಗಳು ಮರುಕಳಿಸದಂತೆ ನಿಗಾವಹಿಸಲು ಈ ಬಗ್ಗೆ ಸಂಬಂಧಿತ ಕಛೇರಿ ಮುಖ್ಯಸ್ಥರು ವಿಶೇಷ ಗಮನ ಹರಿಸುವಂತೆ ಸೂಚಿಸಲಾಗಿದೆ.** ಈ ತರಹದ ಪ್ರಕರಣವು ಗಮನಕ್ಕೆ ಬಂದಲ್ಲಿ ಸಕ್ಷಮ ಪ್ರಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಸೂಕ್ತ ಶಿಸ್ತು ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಆದೇಶದ ಮೇರೆಗೆ,

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರಿಂದ ಅನುಮೋದಿತವಾಗಿದೆ"

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ಮೆಸ್ಕಾಂ.,

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ), ಮೆಸ್ಕಾಂ., ಮಂಗಳೂರು/ಶಿವಮೊಗ್ಗ ವಲಯ.
2. ಅಧೀಕ್ಷಕ ಇಂಜಿನಿಯರ್(ವಿ)(ತಾಂತ್ರಿಕ/ವಾಣಿಜ್ಯ/ಖರೀದಿ/ಯೋಜನೆ), ಮೆಸ್ಕಾಂ., ಕಾರ್ಪೋರೇಟ್ ಕಛೇರಿ, ಮಂಗಳೂರು.
3. ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ವೃತ್ತ, ಮಂಗಳೂರು/ಉಡುಪಿ/ಚಿಕ್ಕಮಗಳೂರು/ಶಿವಮೊಗ್ಗ.

Z:\Prem-2019-20\Circular.docx

4. ಅಧೀಕ್ಷಕ ಇಂಜಿನಿಯರ್(ವಿ), ಡಿ.ಸಿ.ಸಿ & ಸ್ಕಾಡಾ/ಆರ್.ಟಿ.ಪ್ರತ್ತ/ಮಾ.ನಿ.ಸಂ.ಕ. ಕೇಂದ್ರ, ಮೆಸ್ಕಾಂ., ಮಂಗಳೂರು
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
6. ಕಂಪನಿ ಕಾರ್ಯದರ್ಶಿ, ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
7. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐ.ಟಿ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
8. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ವಿಭಾಗ, ಮಂಗಳೂರು-1/ಮಂಗಳೂರು-2/ಬಂಟ್ವಾಳ/ಪುತ್ತೂರು/ಉಡುಪಿ/ಕುಂದಾಪುರ/ಶಿವಮೊಗ್ಗ/ಶಿಕಾರಿಪುರ/ಸಾಗರ/ಭದ್ರಾವತಿ/ಚಿಕ್ಕಮಗಳೂರು/ಕೊಪ್ಪ/ಕಡೂರು- **ತಮ್ಮ ಅಧೀನ ಉಪವಿಭಾಗಾಧಿಕಾರಿ/ಶಾಖಾಧಿಕಾರಿಗಳ ಗಮನಕ್ಕೆ ತರುವುದು ಕಛೇರಿ ನಾಮಫಲಕಗಳಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವುದು.**
9. ಲೆಕ್ಕಾಧಿಕಾರಿ(ಸಾ,ಸಂ&ಸಂ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
10. ಹಿರಿಯ ಆಪ್ತ ಕಾರ್ಯದರ್ಶಿ, ವ್ಯ.ನಿ/ನಿ(ತಾಂ), ಮೆಸ್ಕಾಂ.,
11. ಆಪ್ತ ಕಾರ್ಯದರ್ಶಿ, ಮು.ಆ.ಅ./ಆ.ಸ(ಆಂ.ಪ), ಮೆಸ್ಕಾಂ.,